**ದಿನಾಂಕ: 28-01-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು : ಶ್ರೀ ಕೆ ಎಲ್ ಎನ್ ವಕೀಲರಿಂದ ಆರೋಪಿ ಪರವಾಗಿಃ**

8) ಮೆಣಸಿನ ಕಾಯಿಯನ್ನು ಹಾರೋಹಳ್ಳಿ ಜಗಣ್ಣನವರಿಗೆ ನೀಡಿದ್ದೆ. ಎಷ್ಟಕ್ಕೆ ಕೊಟ್ಟಿದ್ದೆ ಎಂದು ನನಗೆ ಈಗ ಹೇಳಲು ಆಗುವುದಿಲ್ಲ. ಒಟ್ಟು 10 ರಿಂದ 12 ಟನ್ ಮೆಣಸಿನ ಕಾಯಿಯನ್ನು ಕ್ಯೂಯುತ್ತೇವೆ. ಜೂನ್ ನಿಂದ ಆಗಸ್ಟ್ ರವರೆಗೆ ಮೆಣಸಿನ ಕಾಯಿಯನ್ನು ಕ್ಯೂಯುತ್ತೇವೆ. ಜೋಳ ವರ್ಷಕ್ಕೊಮ್ಮೆ ಬೆಳೆಯುತ್ತಿರುತ್ತೇವೆ. ಜೋಳವನ್ನು ಹಗರೆಯ ಲೋಕೇಶ್ ರವರಿಗೆ ಮಾರಾಟ ಮಾಡಿರುತ್ತೇವೆ. ಜೋಳವನ್ನು ಡಿಸೆಂಬರ್ ನಲ್ಲಿ ಮಾರಾಟ ಮಾಡಿರುತ್ತೇನೆ. 2021 ರಲ್ಲಿ ನಾನು ಶುಂಠಿ ಬೆಳೆದಿರಲಿಲ್ಲ , ಜೋಳ ಮತ್ತು ಮೆಣಸಿನ ಕಾಯಿಯನ್ನು ಬೆಳೆದಿರುತ್ತೆನೆ. ಶುಂಠಿಯಿಂದ ಬಂದ ಆದಾಯವನ್ನು ನಾನು ಇಟ್ಟಿಕೊಂಡಿರಲಿಲ್ಲ ಎಂದು ಸೂಚಿಸಲಾಗಿ ನಮ್ಮ ಖರ್ಚಿಗೆ ಆಗುತ್ತದೆ ಎಂದು ಇಟ್ಟಿಕೊಂಡಿದ್ದೆ ಎಂದು ನುಡಿಯುತ್ತಾರೆ. ಜೋಳ ಮತ್ತು ಮೆಣಸಿನ ಕಾಯಿಯಿಂದ ಬಂದ ಆದಾಯವನ್ನು ನಾನು ಮನೆಯಲ್ಲಿಯೇ ಇಟ್ಟಿಕೊಂಡಿದ್ದೆ.

9) ನೋಟೀಸ್ ನಲ್ಲಿ ಜೋಳ ಮತ್ತು ತರಕಾರಿಯಿಂದ ಬಂದ ಹಣವನ್ನು ಇಟ್ಟಿಕೊಂಡಿದ್ದೆ ಎಂದು ಹೇಳಿದ್ದ ಎಂದರೆ ಸರಿ. ನನಗೆ ಓದಲು ಬರೆಯಲು ಸ್ವಲ್ಪ ಸ್ವಲ್ಪ ಬರುತ್ತದೆ. ನೋಟೀಸ್ ನಲ್ಲಿ ಶುಂಠಿ ಮತ್ತು ತರಕಾರಿಯನ್ನು ಮಾರಾಟ ಮಾಡಿದ ಹಣ ಎಂದು ಬರೆಯಲಾಗಿದೆ ಎಂದರೆ ಸರಿ. 2021 ರಲ್ಲಿ ಶುಂಠಿ ಹಣ ಬಂದಿರಲಿಲ್ಲ ಎಂದು ಸೂಚಿಸಲಾಗಿ ಸಾಕ್ಷಿ ಶುಂಠಿಯಿಂದ ಬಂದ ಹಣವನ್ನು ಜೋಳಕ್ಕೆ ಹಾಕಿದ್ದೆ ಎಂದು ನುಡಿಯುತ್ತಾರೆ.

10) ದಿಃ 02-01-2021 ರಂದು ಆರೋಪಿಗೆ ಹಣ ನೀಡಿರುತ್ತೇನೆ. ಈ ಪೂರ್ವಲದ್ಲಿ ನನ್ನ ಮತ್ತು ಆರೋಪಿಯ ನಡುವೆ ಯಾವುದೇ ಹಣ ಕೊಡುವ ತೆಗೆದುಕೊಳ್ಳುವ ವ್ಯವಹಾರ ಇರಲಿಲ್ಲ.ಆರೋಪಿ ಹಣ ಕೇಳಲು 10-11 ಗಂಟೆಗೆ ಬಂದಿದ್ದರು. ಸದರಿ ಸಮಯದಲ್ಲಿ ಮನೆಯಲ್ಲಿ ನಾನು ನನ್ನ ಹೆಂಡತಿ ಇದ್ದೆವು. ಹಣ ಕೇಳಿದ ದಿನವೇ ಆರೋಪಿಗೆ ಹಣ ನೀಡಿರುತ್ತೇನೆ. ಹಣ ಕೊಟ್ಟ ದಿನವೇ ಆರೋಪಿ ಚೆಕ್ ನೀಡಿರುತ್ತಾರೆ. ಸಾಕ್ಷಿ ಮುಂದುವರೆದು

ಬಾಂಕಿನಲ್ಲಿ ಹಣ ಇದ್ದು, ಚೆಕ್ ಹಾಕಿ ಬಿಡಿಸಿಕೋ ಎಂದು ಹೇಳಿದ್ದರು ಎಂದು ನುಡಿಯುತ್ತಾರೆ. ಬ್ಯಾಂಕಿನಲ್ಲಿ ಹಣ ಇದ್ದು ಅದನ್ನೇ ಬಿಡಿಸಿಕೊಳ್ಳಬಹುದಲ್ಲವೇ ಎಂದು ನೀವು ಕೇಳಿಲ್ಲವೇ ಎಂದು ಪ್ರಶ್ನಿಸಲಾಗಿ ಸಾಕ್ಷಿ ಹಣ ಬಿಡಿಸಿಕೊಳ್ಳಲು ಸಾಧ್ಯವಿಲ್ಲ, ಹಣ ಕೊಡಣ್ಣ ಎಂದು ಕೇಳಿ ಪಡೆದುಕೊಂಡರು ಎಂದು ನುಡಿಯುತ್ತಾರೆ. ಹಣ ಏಕೆ ಬಿಡಿಸಿಕೊಳ್ಳಲು ಆಗಲ್ಲ ಎಂದು ಕೇಳಿಲ್ಲವಾ ಎಂದು ಪ್ರಶ್ನಿಸಲಾಗಿ ಸಾಕ್ಷಿ ಆ ರೀತಿ ಹೇಳಿಲ್ಲ ಹಣ ಬ ರುತ್ತದೆ ಬ್ಯಾಂಕಿನಿಂದ ಚೆಕ್ ಹಾಕಿ ಹಣ ಬಿಡಿಸಿಕೊಳ್ಳಿ ಎಂದು ಹೇಳಿದ್ದರು ಎಂದು ನುಡಿಯುತ್ತಾರೆ.

11) ನಿಪಿ 1 ಚೆಕ್ ಲ್ಲಿ ಇರುವ ಬರವಣಿಗೆ ಯಾರು ಬರೆದುಕೊಟ್ಟಿದ್ದರು ಎಂದು ಪ್ರಶ್ನಿಸಲಾಗಿ ಸಾಕಿ ಅವರೇ ಬರೆದುಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಆರೋಪಿಗೆ ಕನ್ನಡ ಬರೆಯಲು ಬರುವುದಿಲ್ಲ ನೀವೇ ಬರೆದುಕೊಂಡಿದ್ದೀರಾ ಎಂದು ಸೂಚಿಸಲಾಗಿ ಸಾಕ್ಷಿ ಇಲ್ಲ ಅವರೇ ಬರೆದುಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ.

12) ಆರೋಪಿ ನನ್ನಿಂದ ಭತ್ತ ತೆಗೆದುಕೊಂಡು ಹೋಗುವ ಸಮಯದಲ್ಲಿ ಖಾಲಿ ಚೆಕ್ ನ್ನು ಕೊಟ್ಟಿದ್ದರು ಎಂದರ ಸರಿಯಲ್ಲ. ಆರೋಪಿ ಭತ್ತ ತೆಗೆದುಕೊಂಡು ಹೋದ ಹಣವನ್ನು ಕೊಟ್ಟಿದ್ದರೂ ಆರೋಪಿಗೆ ಖಾಲಿ ಚೆಕ್ ನ್ನು ಹಿಂತಿರುಗಿಸದೇ ಅಲ್ಲಿದೇ ಇಲ್ಲಿದೇ ಎಂದು ಕಾಲಹರಣ ಮಾಡಿದ್ದೆ ಎಂದರೆ ಸರಿಯಲ್ಲ. ಆರೋಪಿ ಗೃಹಕೃತ್ಯದ ಸಲುವಾಗಿ ಮತ್ತು ವ್ಯಾಪಾರದ ಸಲುವಾಗಿ ನನ್ನಿಂದ ಯಾವಾಗಲು ಸಾಲ ಪಡೆದಿಲ್ಲ ಎಂದರೆ ಸರಿಯಲ್ಲ. ಭತ್ತ ಖರೀದಿಸಿದ ಹಣ ನೀಡಿದ್ದರೂ ಖಾಲಿ ಚೆಕ್ ನ್ನು ಹಿಂತಿರುಹಿಸದೇ ಮೊತ್ತವನ್ನು ನಾನೇ ಬರೆದುಕೊಂಡು ಸುಳ್ಳು ಕೇಸನ್ನು ಹಾಕಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ - ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಒ

ಸಾಕ್ಷಿ ಸಹಿ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ., ಬೇಲೂರು .